# ಸೇವಾದೀಕ್ಷೆ

ಸ್ವಾಮಿ ಗೌತಮಾನಂದ

**ಡಿಸೆಂಬರ್ ೨೦೦೬ರಲ್ಲಿ ಬಳ್ಳಾರಿಯಲ್ಲಿ ನಡೆದ ಅಖಿಲ ಕರ್ನಾಟಕ ಭಕ್ತ ಸಮ್ಮೇಳನದಲ್ಲಿ ಪೂಜ್ಯರು ನೀಡಿದ ಭಾಷಣದಲ್ಲಿ ರಾಮಕೃಷ್ಣ ಸಂಘದ ಸೇವಾತತ್ತ್ವದ ವಿಚಾರಗಳು ಸ್ಪಷ್ಟವಾಗಿ ಮೂಡಿಬಂದಿವೆ. ಸೇವೆಯನ್ನೇ ಸಾಧನವನ್ನಾಗಿಸಿಕೊಳ್ಳುವ ವಿಧಾನದ ಪರಿಚಯ ಈ ಲೇಖನದಲ್ಲಿದೆ. ಪೂಜ್ಯರು ಚೆನ್ನೈನಲ್ಲಿರುವ ರಾಮಕೃಷ್ಣ ಮಠದ ಅಧ್ಯಕ್ಷರು ಹಾಗೂ ರಾಮಕೃಷ್ಣ ಮಹಾಸಂಘದ ಟ್ರಸ್ಟಿಗಳು.**

**ಸೇವೆ ಎಂದರೆ ಏನು?**

ಸೇವಾದೀಕ್ಷೆಯ ಬಗ್ಗೆ ತಿಳಿದುಕೊಳ್ಳುವ ಮೊದಲು ಸೇವೆ ಎಂದರೆ ಏನು ಎಂದು ತಿಳಿಯುವುದು ಅಗತ್ಯ. **ಸೇವೆ ಎಂದರೆ ಪ್ರೀತಿಪೂರ್ವಕವಾಗಿ, ನಿಸ್ವಾರ್ಥವಾಗಿ ಜನರ ಹಿತಕ್ಕಾಗಿ ಮಾಡುವ ಕಾರ್ಯ** ಎಂದು ಹೇಳಬಹುದು. ಈಗ ಈ ವ್ಯಾಖ್ಯಾನದಲ್ಲಿ ಬರುವ ಪದಗಳ ವಿಶ್ಲೇಷಣೆ ಮಾಡೋಣ.

**೧.ಪ್ರೀತಿ:** ಮುಂಬೈಯಲ್ಲಿ ರಾಮಕೃಷ್ಣ ಮಿಷನ್ನಿನ ಆಶ್ರಮ ವೊಂದಿದೆ. ಅಲ್ಲಿ ನಾನು ಹಲವು ವರ್ಷಗಳನ್ನು ಕಳೆದೆ. ಆಶ್ರಮದ ಮಾವಿನ ಮರದ ಹಣ್ಣು ದೊರೆತಾಗ ನಾವು ಶ್ರೀರಾಮಕೃಷ್ಣರಿಗೆ ನೈವೇದ್ಯಕ್ಕಾಗಿ ಕೊಡುತ್ತಿದ್ದೆವು. ಕಾಲ ಕಳೆದಂತೆ ಈ ಮರ ಮುದಿಯಾಯಿತು. ಸರಿಯಾಗಿ ಗೊಬ್ಬರ ಹಾಕದೆ ಇದ್ದುದರಿಂದ ಹಣ್ಣುಗಳೂ ಹುಳಿಯಾದುವು. ಆದರೂ ನಾವು ಆ ಮರದ ಹುಳಿ ಹಣ್ಣುಗಳನ್ನೇ ಶ್ರೀಗುರುಮಹಾರಾಜರಿಗೆ ನೈವೇದ್ಯವಾಗಿ ಕೊಡುತ್ತಿದ್ದೆವು. ಕೆಲವು ಭಕ್ತರು ಬಂದು ಕೇಳಿದರು "ಸ್ವಾಮೀಜಿ, ಈ ಹುಳಿ ಹಣ್ಣುಗಳನ್ನು ಗುರುಮಹಾರಾಜರಿಗೆ ಏಕೆ ಕೊಡುತ್ತೀರಿ?" ಆಗ ನಾವು ಅವರಿಗೆ ಹೀಗೆ ಸಮಜಾಯಿಷಿ ಹೇಳುತ್ತಿದ್ದೆವು: "ಇದು ನಮ್ಮ ಮಠದಲ್ಲೇ ಬೆಳೆದ ಮಾವಿನ ಮರದ ಹಣ್ಣುಗಳಲ್ಲವೇ? ಅದಕ್ಕೇ..." ನೋಡಿದಿರಾ, ನಮ್ಮ ಮಠ, ನಮ್ಮ ಮರದ ಹಣ್ಣು ಎಂಬ ಒಂದೇ ಕಾರಣಕ್ಕೆ ಹುಳಿ ಮಾವಿನ ಹಣ್ಣು ಕೂಡ ಹೇಗೆ ನಮಗೆ ಪ್ರೀತಿಯ ವಸ್ತುವಾಗಿ ಹೋಯಿತು! ಇದರಿಂದ ಏನನ್ನು ತಿಳಿಯುತ್ತೇವೆ? **ನಾವು ಯಾವುದರಲ್ಲಿ ಇದು ನನ್ನದು ಎಂದು ತಾದಾತ್ಮ್ಯವನ್ನು ಬೆಳೆಸಿ ಕೊಳ್ಳುತ್ತೇವೆಯೋ ಅಲ್ಲಿ ನಿಜವಾದ ಪ್ರೀತಿ ಇರುತ್ತದೆ. ಅಲ್ಲವೇ? ಅಂದರೆ ನಿಜವಾದ ಪ್ರೀತಿ 'ಆತ್ಮತ್ವ'ದಿಂದ ಬರುತ್ತದೆ.**

**೨.ನಿಸ್ವಾರ್ಥತೆ:** ವಿನೋಬಾ ಭಾವೆ ಒಂದು ಪ್ರಸಂಗವನ್ನು ಹೀಗೆ ನಿರೂಪಿಸುತ್ತಾರೆ: ಒಬ್ಬ ನ್ಯಾಯಾಧೀಶನಿದ್ದ. ಅವನು ಬಹಳ ನಿಷ್ಠಾವಂತ. ಅಪರಾಧಿಗಳ ತಪ್ಪಿಗೆ ತಕ್ಕಂತೆ, ನ್ಯಾಯಯುತ ವಾಗಿ ದಂಡನೆ ವಿಧಿಸುತ್ತಿದ್ದ. ಅವನನ್ನು ಕಂಡರೆ ಅಪರಾಧಿಗಳು ನಡುಗುತ್ತಿದ್ದರು. ಆದರೆ ಒಂದು ದಿನ ಅವನ ಮಗನೇ ಒಂದು ಹಿಂಸೆಯ ಕೃತ್ಯದಲ್ಲಿ ಸಿಕ್ಕಿಬಿದ್ದ. ಕಾನೂನಿನ ಪ್ರಕಾರ ಅವನಿಗೆ ಗಲ್ಲು ಶಿಕ್ಷೆ ಕೊಡಬೇಕಾಗಿತ್ತು. ಆದರೆ ಈಗ ಇಂತಹ ನ್ಯಾಯಾ ಧೀಶನೇ ಹಿಂದೇಟು ಹಾಕಿದ. ಅದಕ್ಕೆ ಹೀಗೆ ಕಾರಣವನ್ನೂ ಕೊಟ್ಟ: "ನೋಡಿ, ಒಂದೇ ಸಾರಿ ಇವನನ್ನು ಗಲ್ಲಿಗೇರಿಸಿಬಿಟ್ಟರೆ ಇವನಿಗೆ ತಿದ್ದಿಕೊಳ್ಳಲು ಅವಕಾಶವೇ ಇಲ್ಲದಂತಾಗಿಬಿಡುತ್ತದೆ. ಎಷ್ಟೋ ಅಪರಾಧಿಗಳು ತಮ್ಮನ್ನು ತಿದ್ದಿಕೊಂಡಿರುವುದನ್ನು ನಾನು ನೋಡಿದ್ದೇನೆ. ಆದ್ದರಿಂದ ನನ್ನ ಮಗನಿಗೆ ಒಂದು ಅವಕಾಶವನ್ನಾದರೂ ಕೊಡಬೇಡವೆ?" ನ್ಯಾಯಾಧೀಶನ ವಾದದ ಹಿಂದೆ ನ್ಯಾಯ ಇರಲಿಲ್ಲ. ಅಲ್ಲಿ ತುಂಬಿದ್ದುದು ಬರಿ ಮಮತೆ ಅಥವಾ ಮಾಯೆ. ಇದರ ಕಾರಣ ಸ್ಪಷ್ಟ. ಆ ನ್ಯಾಯಾಧೀಶ ಬೇರೆಯವರಿಗೆ ಕೊಟ್ಟ ತೀರ್ಪಿನ ನ್ಯಾಯವೇ ಬೇರೆ, ತನ್ನ ಮಗನ ವಿಷಯದಲ್ಲಿ ಕೊಟ್ಟುಕೊಂಡ ತೀರ್ಪಿನ ನ್ಯಾಯವೇ ಬೇರೆ. ಇಲ್ಲಿ ನಾವು ಕಾಣುವುದು ಸಮದರ್ಶಿತ್ವದ ಅಥವಾ ನಿಷ್ಪಕ್ಷ ಭಾವನೆಯ ಅಭಾವ. ಇದನ್ನೇ ನಾವು **ಸ್ವಾರ್ಥ** ಎಂದು ಕರೆಯುತ್ತೇವೆ.

**ನಿಸ್ವಾರ್ಥತೆ** ಎಂಬ ಪದದಲ್ಲಿ 'ನಿ' ಎಂಬ ಅಕ್ಷರವು ಸ್ವಾರ್ಥದ ಅಭಾವವನ್ನು ಹೇಳುತ್ತದೆ. ನಮ್ಮ ಸ್ವಂತದ ಲಾಭ ನಷ್ಟಗಳ ಚಿಂತನೆಯಿಂದ ಮುಕ್ತವಾದದ್ದು ಎಂದು ಇದರ ಅರ್ಥ. ನಿಸ್ವಾರ್ಥತೆ ಇದ್ದಲ್ಲಿ ಸಮದರ್ಶಿತ್ವ ಮತ್ತು ನ್ಯಾಯ ಬುದ್ಧಿಗಳು ಇರುತ್ತವೆ. ಅದಿಲ್ಲದೆ ಇದ್ದಲ್ಲಿ ನಾವು ಈಗಾಗಲೇ ನೋಡಿದ ಹಾಗೆ ಪಕ್ಷಪಾತ ಮತ್ತು ಅನ್ಯಾಯಗಳು ತಾಂಡವ ವಾಡುತ್ತಿರುತ್ತವೆ. ಹಾಗೆಂದೆ ಭಗವದ್ಗೀತೆಯಲ್ಲಿ ಶ್ರೀಕೃಷ್ಣನು **ಸುಖದುಃಖೇ ಸಮೇ ಕೃತ್ವಾ ಲಾಭಾಲಾಭೌ ಜಯಾಜಯೌ**— ಸುಖದುಃಖಗಳನ್ನೂ ಲಾಭ-ನಷ್ಟಗಳನ್ನೂ ಜಯ-ಅಪ ಜಯಗಳನ್ನೂ ಸಮವಾಗಿ ನೋಡು ಎಂದು ಅರ್ಜುನನಿಗೆ ಉಪದೇಶಿಸುತ್ತಾನೆ. ಇಲ್ಲಿ ಶ್ರೀಕೃಷ್ಣ ಉಪದೇಶಿಸುವುದು ನಿಸ್ವಾರ್ಥ ಭಾವನೆಯಿಂದ ಮಾಡಬೇಕಾದ ಕರ್ಮಯೋಗವನ್ನು.

**೩.ಜನಹಿತ:** ಸ್ವಾಮಿ ರಾಮಕೃಷ್ಣಾನಂದರು ಶ್ರೀರಾಮಕೃಷ್ಣರ ಸಾಕ್ಷಾತ್ ಶಿಷ್ಯರಲ್ಲಿ ಒಬ್ಬರು. ಅವರು ಸ್ವಾಮಿ ವಿವೇಕಾನಂದರ ಬಗ್ಗೆ ಒಂದು ಸ್ತೋತ್ರವನ್ನು ರಚಿಸಿದ್ದಾರೆ. ಅದರಲ್ಲಿ ವಿವೇಕಾ

ನಂದರನ್ನು ಹೀಗೆ ಬಣ್ಣಿಸುತ್ತಾರೆ: **ಹಿತಾಯ ನೃಣಾಂ** ನರಮೂರ್ತಿಮಂತಂ— ಸ್ವಾಮಿ ವಿವೇಕಾನಂದರು ಜನರ ಹಿತಕ್ಕಾಗಿ ಧರೆಗಿಳಿದು ಬಂದ ಮಹಾಪುರುಷರು. 'ಹಿತ' ಎಂದರೇನು? ಶಾಶ್ವತ ಸುಖವನ್ನು ಕೊಡುವುದನ್ನು ಶ್ರೇಯಸ್ಸು ಎಂದು ಕಠೋಪನಿಷತ್ತು ಬಣ್ಣಿಸುವುದು. ಅದೇ 'ಹಿತ'. ಶ್ರೇಯಶ್ಚ ಪ್ರೇಯಶ್ಚ ಮನುಷ್ಯಮೇತೌ... (ಕಠ, ೭) ಶಾಶ್ವತ ಸುಖ ಕೊಡುವ ಹಿತ(ಶ್ರೇಯಸ್ಸು), ಕ್ಷಣಿಕವಾದ ಲೌಕಿಕ ಸುಖ (ಪ್ರೇಯಸ್ಸು). ಇವೆರಡೂ ಒಟ್ಟಿಗೆ ಒಬ್ಬ ವ್ಯಕ್ತಿಯನ್ನು ಸಮೀಪಿಸುತ್ತವೆ. ಉಪನಿಷತ್ತು ಹೇಳುತ್ತದೆ, ಹಿತವನ್ನು ಆರಿಸಿಕೊಂಡವನು ಶಾಶ್ವತ ಸುಖವನ್ನು ಪಡೆಯುತ್ತಾನೆ, ಲೌಕಿಕ ಸುಖವನ್ನು ಆರಿಸಿಕೊಂಡವನು ಮತ್ತೆ ಮತ್ತೆ ಸಂಸಾರಚಕ್ರದಲ್ಲಿ ಬೀಳುತ್ತಾನೆ ಎಂದು. ಯಾರ ಆಶ್ರಯವನ್ನು ಪಡೆದರೆ ನಮಗೆ ಶಾಶ್ವತವಾದ ಆನಂದ ದೊರಕುತ್ತದೋ ಅಂತಹ ಅವತಾರ ಪುರುಷರೇ ನಮ್ಮ ನಿಜವಾದ ಹಿತೈಷಿಗಳು. ಅಂತಹ ಲೋಕ ಹಿತೈಷಿ ಸ್ವಾಮಿ ವಿವೇಕಾನಂದರ ಜೀವನ-ಸಂದೇಶಗಳಿಂದ ಸೇವೆ ಕುರಿತ ವಿಚಾರಗಳನ್ನು ನಾವು ತಿಳಿಯಬಹುದು.

### ಸೇವಾದೀಕ್ಷೆ

ಮೇಲಿನ ವಿವರಣೆಯಿಂದ, 'ಸೇವೆ' ಎಂದರೆ ಪ್ರೀತಿ, ನಿಸ್ವಾರ್ಥ ಮತ್ತು ಹಿತಗಳಿಂದ ಕೂಡಿದ ಕರ್ಮ ಎಂದು ತಿಳಿದೆವು. ಈಗ ದೀಕ್ಷೆಯ ಅರ್ಥವನ್ನು ತಿಳಿಯೋಣ. ದೀಕ್ಷೆ ಎಂದರೆ **ಸಂಕಲ್ಪ, ವ್ರತ, ಶಪಥ, ಪ್ರತಿಜ್ಞೆ** ಅಥವಾ **ನಿಷ್ಠೆ** ಎಂದು ಹೇಳಬಹುದು.

### ೧. ಶ್ರೀರಾಮಕೃಷ್ಣರು ಶ್ರೀಮಾತೆಯವರಿಗಿತ್ತ ಸೇವಾದೀಕ್ಷೆ

ಶ್ರೀರಾಮಕೃಷ್ಣರು ಶ್ರೀಮಾತೆ ಶಾರದಾದೇವಿಯವರಿಗೆ ಹೀಗೆ ಹೇಳುತ್ತಾರೆ: "ನೀನು ಕೊಲ್ಕತ್ತಾದ ಜನರನ್ನು ಉದ್ಧರಿಸಬೇಕು. ಅವರು ಹುಳುಗಳಂತೆ ನರಳುತ್ತಿದ್ದಾರೆ." ಇಲ್ಲಿ ಕೊಲ್ಕತಾ ನಗರವು ವಿಷಯಭೋಗಗಳ ಅತ್ಯಾಸಕ್ತಿಯಿಂದ ಕಲುಷಿತಗೊಂಡ ಮನಸ್ಸುಳ್ಳ ಆಧುನಿಕ ಜನರನ್ನು ಪ್ರತಿನಿಧಿಸುತ್ತದೆ. "ಅಂತಹವರನ್ನು ಆಧ್ಯಾತ್ಮಿಕಸಂಪನ್ನರನ್ನಾಗಿ ಮಾಡು" ಎಂಬ ಮಹಾನ್ 'ಸೇವಾದೀಕ್ಷೆ'ಯನ್ನು ಶ್ರೀರಾಮಕೃಷ್ಣರು ಶ್ರೀಮಾತೆ ಶಾರದಾದೇವಿಯವರಿಗೆ ನೀಡಿದರು. ಶ್ರೀಮಾತೆಯವರು ಪ್ರತಿಭಟಿಸಿದರು, "ನಾನು ಹೆಣ್ಣುಹೆಂಗಸು. ನಾನೇನು ಮಾಡಬಲ್ಲೆ!" ಆಗ ಶ್ರೀರಾಮಕೃಷ್ಣರು ಹೇಳುತ್ತಾರೆ: "ಇಲ್ಲ, ಇಲ್ಲ, ನಾನೇನು ತಾನೆ ಮಾಡಿದ್ದೇನೆ? ನೀನು ನನಗಿಂತ ಹೆಚ್ಚಿಗೆ ಮಾಡುತ್ತೀಯೆ." ಇದು ಮುಂದೆ ಸತ್ಯವೇ ಆಯಿತು. ಶ್ರೀರಾಮಕೃಷ್ಣರು ಜಗತ್ತಿಗೆ ಬೋಧಿಸಿದ ಅವಧಿ ಕೇವಲ ಹತ್ತು ವರ್ಷಗಳಾದರೆ (೧೮೭೬-೮೬), ಇದೇ ಕಾರ್ಯವನ್ನು ಶ್ರೀಮಾತೆಯವರು ೩೪ ವರ್ಷಗಳ ಸುದೀರ್ಘ ಅವಧಿಯವರೆಗೆ ಮಾಡಿದರು. ಉತ್ತಮ ವಿದ್ಯಾವಂತರೂ ಸುಸಂಸ್ಕೃತರೂ ಆದ ನೂರಿನ್ನೂರು ಜನರಿಗೆ ಶ್ರೀರಾಮಕೃಷ್ಣರು ಪ್ರೇರಣೆ ಕೊಟ್ಟರೆ, ಸಾವಿರಾರು ಅನರ್ಹರಿಗೆ, ಪಾಪಿಗಳಿಗೆ ತಾಯಿಯಾಗಿ, 'ದೀಕ್ಷೆ'ಯನ್ನು ಕೊಟ್ಟು ಉದ್ಧರಿಸಿದರು ಶ್ರೀಮಾತೆ! ಇದೇ ಶ್ರೀಮಾತೆಯವರು ಕೈಗೊಂಡ ಸೇವಾ ದೀಕ್ಷೆ. ಅದಕ್ಕೇ ಅವರ ಸುಪ್ರಭಾತದಲ್ಲಿ ಹೀಗೆ ಹೇಳಿದೆ **ಸರ್ವಂ ಸಹೇ ಶ್ರಿತಜನೋದ್ಧರಣೈಕದೀಕ್ಷೇ**—ಆಶ್ರಿತಜನರನ್ನು ಉದ್ಧಾರ ಮಾಡುವುದನ್ನೇ ಏಕೈಕ ದೀಕ್ಷೆಯಾಗಿ ಕೈಗೊಂಡ ನೀನು ಅದಕ್ಕಾಗಿ ಎಲ್ಲವನ್ನೂ ಸಹಿಸಿದೆ.

### ೨. ಶ್ರೀರಾಮಕೃಷ್ಣರು ಸ್ವಾಮಿ ವಿವೇಕಾನಂದರಿಗಿತ್ತ ಸೇವಾದೀಕ್ಷೆ

೧೮೮೬ನೇ ಇಸವಿ. ಕಾಶೀಪುರದ ಉದ್ಯಾನವನದಲ್ಲಿ ಒಂದು ದಿನ ಸ್ವಾಮಿ ವಿವೇಕಾನಂದರು ನಿರ್ವಿಕಲ್ಪ ಸಮಾಧಿ ಎಂಬ ಸರ್ವೋಚ್ಚ ಅನುಭವವನ್ನು ದಯಪಾಲಿಸುವಂತೆ ಶ್ರೀರಾಮಕೃಷ್ಣರನ್ನು ಕೇಳಿಕೊಳ್ಳುತ್ತಾರೆ, ಅದರಲ್ಲಿಯೇ ಸತತವೂ ಮುಳುಗಿರುವಂತೆ ಮಾಡಬೇಕೆಂದು ಬೇಡಿಕೊಳ್ಳುತ್ತಾರೆ. ಅದಕ್ಕೆ ಶ್ರೀರಾಮಕೃಷ್ಣರು ಕೊಟ್ಟ ಉತ್ತರ ಇದು: "ಛೀ, ನೀನು ವಟ ವೃಕ್ಷದಂತೆ ಸಾವಿರಾರು ಜನರಿಗೆ ನೆರಳಾಗಿ, ಭೌತಿಕ ಮತ್ತು ಆಧ್ಯಾತ್ಮಿಕ ಶಾಂತಿಯನ್ನು ಕೊಡುವೆ ಎಂದು ತಿಳಿದಿದ್ದೆ. ಕೇವಲ ನಿನ್ನ ಸ್ವಾರ್ಥಕ್ಕಾಗಿ ಆನಂದವನ್ನು ಬೇಡುತ್ತೀಯಲ್ಲ! ಸಮಾಧಿಗಿಂತ ಹೆಚ್ಚಾದ ಒಂದು ಅನುಭವವುಂಟು. ಅದೇನು ಗೊತ್ತೆ? ಎಲ್ಲರಲ್ಲಿಯೂ ಎಲ್ಲದರಲ್ಲಿಯೂ ಆ ಪರಮಾತ್ಮನನ್ನು ಕಾಣುವುದು. ಜನಾರ್ದನನಿಗೆ ಮಾಡುವ ಪೂಜೆಯಂತೆಯೇ ಜನ ಸೇವೆಯನ್ನೂ ಮಾಡುವುದು." ಇದೇ ವಿಜ್ಞಾನ ಸ್ಥಿತಿ. ಇದು ಕಣ್ಣು ತೆರೆದಿದ್ದುಕೊಂಡೂ ಎಲ್ಲೆಲ್ಲಿಯೂ ಎಲ್ಲರಲ್ಲಿಯೂ ಭಗವದ್ದರ್ಶನ ಮಾಡುವ ಪರಮ ಸ್ಥಿತಿ. ಅದನ್ನು ಶ್ರೀರಾಮಕೃಷ್ಣರು ಸ್ವಾಮಿ ವಿವೇಕಾನಂದರಿಗೆ ಅನುಗ್ರಹಿಸಿದರು. ಬ್ರಹ್ಮ ಹೇಗೆ ಸತ್ಯವೋ ಅದಕ್ಕಿಂತ ಅಭೇದವಾದ, ಜಗತ್ತಿನ ರೂಪದಲ್ಲಿ ಇರುವ ಶಕ್ತಿಯೂ ಸತ್ಯವೇ ಎನ್ನುವುದು ಶ್ರೀರಾಮಕೃಷ್ಣರ ಅಭಿಪ್ರಾಯವಾಗಿತ್ತು. ನಂತರ ಇನ್ನೊಂದು ಸಂದರ್ಭದಲ್ಲಿ ಶ್ರೀರಾಮಕೃಷ್ಣರು ಒಂದು ಕಾಗದದಲ್ಲಿ ಬರೆದರು: "ನರೇಂದ್ರ ಜಗತ್ತಿಗೆಲ್ಲ ಉಪದೇಶ ಕೊಡುತ್ತಾನೆ." ಹೀಗೆ ಸ್ವಾಮಿ ವಿವೇಕಾನಂದರಿಗೆ ಶ್ರೀರಾಮಕೃಷ್ಣರು 'ಜಗದ್ಗುರು' ಪಟ್ಟವನ್ನು ಕಟ್ಟಿದರು. ಜಗಜ್ಜನನಿಯ ಕೆಲಸವನ್ನು ಮಾಡಲು ಆದೇಶವಿತ್ತರು. ಇದೇ ಶ್ರೀರಾಮಕೃಷ್ಣರು ವಿವೇಕಾನಂದರಿಗಿತ್ತ 'ಸೇವಾದೀಕ್ಷೆ'.

ಶ್ರೀರಾಮಕೃಷ್ಣರಿಂದ ಸೇವಾದೀಕ್ಷೆಯನ್ನು ಪಡೆದುಕೊಂಡ ಸ್ವಾಮಿ ವಿವೇಕಾನಂದರು ಹೀಗೆ ಪ್ರತಿಜ್ಞೆ ಮಾಡುತ್ತಾರೆ: "ಈ ದೇಶದ ಯುವಕರನ್ನು ಒಟ್ಟುಗೂಡಿಸಿ ಸನಾತನ ಧರ್ಮದ ಉದ್ಧಾರ ಮಾಡುವುದಕ್ಕಾಗಿಯೇ ನಾನು ಹುಟ್ಟಿದ್ದೇನೆ. ಇದನ್ನು ನಾನು ಮಾಡುತ್ತೇನೆ, ಇಲ್ಲದಿದ್ದರೆ ಮಡಿಯುತ್ತೇನೆ." ಇದೇ ಅವರ ಸೇವಾದೀಕ್ಷೆ.

ಯಥಾರ್ಥ ಧರ್ಮವನ್ನು ಹರಡುವುದರ ಮೂಲಕ ಈ

ದೇಶದ ಧರ್ಮವನ್ನು ಕಾಪಾಡುವುದು ಮತ್ತು ಸಾವಿರಾರು ತ್ಯಾಗೀಭಕ್ತರು, ಜ್ಞಾನಿಗಳು ಮತ್ತು ಕರ್ಮಯೋಗಿಗಳನ್ನು ಸೃಷ್ಟಿಸಿ ಪ್ರಪಂಚದಲ್ಲೆಲ್ಲ ನಿಜವಾದ ಧಾರ್ಮಿಕತೆ ಮತ್ತು ಆಧ್ಯಾತ್ಮಿಕತೆಗಳನ್ನು ಹರಡುವ ಮಹಾಸಂಕಲ್ಪವೇ ಸ್ವಾಮಿ ವಿವೇಕಾನಂದರ ಸೇವಾದೀಕ್ಷೆ!

## ಧರ್ಮಪ್ರಚಾರ ಮಾಡುವವರಿಗೆ 'ಭಗವಂತನ ಆಜ್ಞೆ'

ಪಂಡಿತ ಶಶಧರ ತರ್ಕಚೂಡಾಮಣಿ ಕೊಲ್ಕತಾದಲ್ಲಿ ಹೆಸರಾಂತ ವಿದ್ವಾಂಸ ಮತ್ತು ವಾಗ್ಮಿಯಾಗಿದ್ದರು. ಕೊಲ್ಕತಾದಲ್ಲಿ ಹಿಂದೂ ಧರ್ಮದ ಬಗ್ಗೆ ಭಾಷಣ ಮಾಡಿ ಸಾವಿರಾರು ಯುವಕರನ್ನು ಮುಗ್ಧಗೊಳಿಸಿದ್ದರು. ನರೇಂದ್ರ ಮತ್ತು ಇನ್ನಿತರ ಶ್ರೀರಾಮಕೃಷ್ಣರ ಯುವಭಕ್ತರು ಇವರ ಭಾಷಣಗಳನ್ನು ಆಲಿಸಿದ್ದರು. ಇವರ ವಿದ್ವತ್ತಿನ ಬಗ್ಗೆ ಕೇಳಿ ತಿಳಿದ ಶ್ರೀರಾಮಕೃಷ್ಣರು ಶಶಧರರನ್ನು ಕಾಣಲು ಬಯಸಿದರು. ಒಂದು ದಿನ ಅವರೇ ದಕ್ಷಿಣೇಶ್ವರಕ್ಕೆ ಬಂದರು. ಅಲ್ಲಿ ನೆರೆದಿದ್ದವರಲ್ಲಿ ಕೆಲವರಿಗೆ ಇಂಥ ವಿದ್ವಾಂಸನನ್ನು ಶಿಕ್ಷಣವೆಂದರೇನೆಂದು ತಿಳಿಯದ ಪರಮಹಂಸರು ಹೇಗೆ ಎದುರಿಸಿಯಾರು ಎಂಬ ಕುತೂಹಲ! ಆದರೆ ಶಶಧರ ಬಂದು ನಮಸ್ಕಾರ ಮಾಡಿ ಎದ್ದಕೂಡಲೆ ಶ್ರೀರಾಮಕೃಷ್ಣರು ಅವರಿಗೊಂದು ಪ್ರಶ್ನೆ ಹಾಕಿದರು, "ನೀನು ಧರ್ಮಪ್ರಚಾರ ಮಾಡುತ್ತಿದ್ದೀಯಲ್ಲ, ನಿನಗೆ ದೇವರ ದರ್ಶನವಾಗಿದೆಯೇ? ದೇವರು ನಿನಗೆ ಉಪದೇಶಿಸಲು ಆಜ್ಞೆ ಕೊಟ್ಟಿದ್ದಾನೆಯೇ?" ಈ ಪ್ರಶ್ನೆಯನ್ನು ಕೇಳಿ ಶಶಧರ ಕಕ್ಕಾಬಿಕ್ಕಿಯಾದ. "ಇಲ್ಲ, ಮಹಾಶಯರೇ, ನನಗೆ ದೇವರ ದರ್ಶನವೂ ಆಗಿಲ್ಲ, ಆಜ್ಞೆಯೂ ಸಿಕ್ಕಿಲ್ಲ" ಎಂದ. ಆಗ ಶ್ರೀರಾಮಕೃಷ್ಣರೆಂದರು, "ಹಾಗಾದರೆ, ನಿನ್ನ ಉಪನ್ಯಾಸಗಳು ಜನರಿಗೆ ಯಾವ ಉಪಕಾರವನ್ನೂ ಮಾಡಲಾರವು. ಅವರು ಅವುಗಳನ್ನು ಈ ಕಿವಿಯಿಂದ ಕೇಳಿ ಆ ಕಿವಿಯಿಂದ ಬಿಟ್ಟುಬಿಡುವರು. ನೋಡು, **ಭಗವಂತನ ಆಜ್ಞೆ** ಪಡೆದವನು ಹೇಳುವ ಮಾತುಗಳು ಮಾತ್ರ ಜನಗಳ ಮನಸ್ಸನ್ನು ಪರಿವರ್ತಿಸಬಲ್ಲವು. ಆದ್ದರಿಂದ ಸ್ವಲ್ಪ ಸಾಧನೆ ಮಾಡಿ ದೈವಾಜ್ಞೆ ಪಡೆದುಕೋ." ಹೀಗೆ ಶ್ರೀರಾಮಕೃಷ್ಣರು ಶಶಧರ ತರ್ಕಚೂಡಾಮಣಿಗೆ ಉಪದೇಶಿಸಿದರು. ಇದರಿಂದ ನಮಗೇನು ತಿಳಿಯಬರುವುದೆಂದರೆ, ಧರ್ಮಪ್ರಚಾರ ಮಾಡುವವರು ಕೇವಲ ವಿದ್ವಾಂಸರಾಗಿದ್ದರೆ ಮಾತ್ರ ಸಾಲದು, ಆಧ್ಯಾತ್ಮಿಕ ಸಾಧನಾ ಮಾರ್ಗದಲ್ಲಿ ಮುಂದುವರೆದವರೂ ಆಗಿರಬೇಕು.

## ಶಿವಜ್ಞಾನೇ ಜೀವಸೇವಾ

ಶ್ರೀರಾಮಕೃಷ್ಣರು ಸ್ವಾಮಿ ವಿವೇಕಾನಂದರಿಗೆ ನೀಡಿದ ಮತ್ತೊಂದು ಮುಖ್ಯ ಉಪದೇಶವೆಂದರೆ: **ಶಿವಜ್ಞಾನೇ ಜೀವಸೇವಾ** — ಪ್ರತಿಯೊಂದು ಜೀವನಲ್ಲಿಯೂ ಶಿವನೇ ಇದ್ದಾನೆ ಎಂದು ತಿಳಿದು ಸೇವೆ ಮಾಡುವುದು. ಸೇವೆಯಲ್ಲಿ ನಾಲ್ಕು ಬಗೆಗಳಿವೆ: **ಭೌತಿಕ, ಬೌದ್ಧಿಕ, ನೈತಿಕ ಹಾಗೂ ಆಧ್ಯಾತ್ಮಿಕ**. ನಾವು ಮಾಡುವ ಯಾವುದೇ ಬಗೆಯ ಜೀವಸೇವೆಯೂ ಶಿವನಿಗೆ ಸಲ್ಲಿಸಿದ ಪೂಜೆಯೇ ಆಗುವುದು ಎಂದು ಇದರ ಅರ್ಥ. ಜಗತ್ತಿನ ಎಲ್ಲ ಸಮಸ್ಯೆಗಳಿಗೂ ಕಾಯಕಲ್ಪ ಅಥವಾ ಸಂಜೀವಿನಿಯಾಗಬಲ್ಲ ಈ ಸಂದೇಶವನ್ನು ಸ್ವಾಮಿ ವಿವೇಕಾನಂದರು ಇಡೀ ಜಗತ್ತಿಗೆ ಬೋಧಿಸಿ ಹೊಸ ಮಾರ್ಗವನ್ನೇ ತೆರೆದಿಟ್ಟಿದ್ದಾರೆ. ಅದರಲ್ಲೂ ಮುಖ್ಯವಾಗಿ ಭಾರತೀಯರಿಗೆ ಈ ಕೆಳಗಿನ ಅಗ್ನಿಮಂತ್ರವನ್ನು ಅವರು ಕೊಟ್ಟಿದ್ದಾರೆ:

"ಭಾರತೀಯರೇ, ನಿಮ್ಮ ರಾಷ್ಟ್ರೀಯ ಆದರ್ಶ **ತ್ಯಾಗ ಮತ್ತು ಸೇವೆ**. ನಿಮ್ಮ ಜೀವನದ ಧ್ಯೇಯ **ವೈಯಕ್ತಿಕ ಆತ್ಮೋನ್ನತಿ ಮತ್ತು ಜಗತ್ತಿನ ಕಲ್ಯಾಣ (ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ)**. ಅದನ್ನು ಸಾಧಿಸಲು ಸದ್ಗುಣಸಂಪನ್ನರಾಗಿ! ಹೃತ್ಪೂರ್ವಕವಾಗಿ ಭಗವಂತನ ದರ್ಶನಕ್ಕಾಗಿ ಕಣ್ಣೀರು ಸುರಿಸಿ. ನಿಮ್ಮ ಮತ್ತು ಎಲ್ಲರ ಹಿತಕ್ಕಾಗಿ ಪ್ರಾರ್ಥಿಸಿ! ಹಾಗೆ ದೊರೆತ ಆತ್ಮಶಕ್ತಿಯನ್ನು ಪರರ ಹಿತಸಾಧನೆಗಾಗಿ ಉಪಯೋಗಿಸಿ. ಗುಡಿ, ತೀರ್ಥಸ್ನಾನ ಮತ್ತು ಪ್ರಾರ್ಥನಾ ಮಂದಿರಗಳಲ್ಲಿ ಪ್ರಾರ್ಥಿಸುವುದು ಒಳ್ಳೆಯದೇ. ಅದರಂತೆಯೇ ಕಷ್ಟನಷ್ಟಗಳಿಗೆ ಸಿಲುಕಿರುವವರಿಗೆ ಸೇವೆಯನ್ನೂ ಸಲ್ಲಿಸಿರಿ, ಅವರಲ್ಲಿ ಸುಪ್ತವಾಗಿರುವ ಶಿವನನ್ನು ಪೂಜಿಸಿರಿ!"

ಈ ಬಗೆಯ ಸೇವಾದೀಕ್ಷೆ ನಿಜವಾಗಲೂ ಫಲ ಕೊಡುವುದೆ? ಶ್ರೀರಾಮಕೃಷ್ಣರ ಮತ್ತೊಬ್ಬ ಶಿಷ್ಯರಾದ ಸ್ವಾಮಿ ತುರೀಯಾನಂದರಿಗೆ ಸ್ವಾಮಿ ವಿವೇಕಾನಂದರು ಹೀಗೆ ಹೇಳಿದ್ದಾರೆ, "ಹರಿಭಾಯಿ! ಹಳೆಯ ಕಾಲದಲ್ಲಿ ಧ್ಯಾನ, ಪ್ರಾರ್ಥನೆ, ಯೋಗ ಇವುಗಳಿಂದ ಯಾವ ಆತ್ಮಜ್ಞಾನವನ್ನು ಸಾಧಕರು ಪಡೆದುಕೊಳ್ಳುತ್ತಿದ್ದರೋ ಅದನ್ನು ಹೊಂದಲು ಈ ಯುಗಕ್ಕೆ ಒಂದು ಹೊಸ, ಆದರೆ ಬಹಳ ಸರಳವಾದ ಮಾರ್ಗವನ್ನು ನಾನು ಅನ್ವೇಷಿಸಿದ್ದೇನೆ. ಅದೇನೆಂದರೆ **ಜೀವನಲ್ಲಿ ಶಿವನನ್ನು ಕಂಡು ಮಾಡುವ ಸೇವೆ**".

ಕಳೆದ ವರ್ಷ ಪ್ರವಾಸಿಗರ ವಿಹಾರಸ್ಥಾನವಾದ ಮಾರಿಷಸ್ ದ್ವೀಪಕ್ಕೆ ಹೋಗಿದ್ದೆ. ಅಲ್ಲಿ ರಾಮಕೃಷ್ಣ ಮಿಷನ್ನಿನ ಒಂದು ಕೇಂದ್ರವಿದೆ. ಆ ಊರಿನಲ್ಲಿ ೧೦,೦೦೦ ಜನ ಕೂಡಬಹುದಾದ ಬೃಹದಾಕಾರದ ಅತ್ಯುತ್ತಮ ಸಭಾಂಗಣವಿದೆ. ಅಲ್ಲಿ ವಿವಿಧ ದೇಶಗಳ ಅಧ್ಯಕ್ಷರು, ಪ್ರಧಾನ ಮಂತ್ರಿಗಳು ಸೇರದಂತೆ ಸುಮಾರು ೧೦೦ ಗಣ್ಯವ್ಯಕ್ತಿಗಳು ತಂಗಬಹುದಾದ, ಬೇರೆ ಬೇರೆ ವಸತಿ ಸಮುಚ್ಚಯಗಳಿರುವ, ಬೃಹತ್ ಕಟ್ಟಡವೊಂದನ್ನು ಕಂಡೆ! ಅದರ ಹೆಸರು ಏನು ಗೊತ್ತೆ? Swami Vivekananda International Conference Centre—**ಸ್ವಾಮಿ ವಿವೇಕಾನಂದ ವಿಶ್ವಸಮ್ಮೇಳನ ಕೇಂದ್ರ** ಎಂದು. ಅದರ ಪ್ರವೇಶದ್ವಾರದಲ್ಲಿ ವಿವೇಕಾನಂದರ

ಎದೆಮಟ್ಟದ ಪ್ರತಿಮೆಯೊಂದನ್ನು (Bust) ಇರಿಸಿ ಅದರ ಕೆಳಗೆ ಸ್ವಾಮಿಜಿಯ ಈ ವಾಣಿಯನ್ನು ಬರೆದಿಡಲಾಗಿದೆ:

ವಿಶ್ವದಲ್ಲಿ ಎಲ್ಲರೂ ಸ್ವೀಕರಿಸಬಹುದಾದ ಒಂದು ವಿಶ್ವಧರ್ಮ ಉಂಟು— ಜಗತ್ತಿನ ಎಲ್ಲಾ ಬಡಬಗ್ಗರಿಗೆ ನಿಸ್ವಾರ್ಥ ಸೇವೆ ಸಲ್ಲಿಸುವುದು.



ಮಾರಿಷಸ್‌ನಲ್ಲಿರುವ ಸ್ವಾಮಿ ವಿವೇಕಾನಂದ ವಿಶ್ವಸಮ್ಮೇಳನ ಕೇಂದ್ರ

## ಸ್ವಾಮಿ ಅಖಂಡಾನಂದರ ಆದರ್ಶ

ಸ್ವಾಮಿ ವಿವೇಕಾನಂದರ ಈ ಸೇವಾ ದೀಕ್ಷೆಯ ಅನುಷ್ಠಾನಕ್ಕೆ ಅವರ ಪ್ರಿಯ ಸೋದರ ಶಿಷ್ಯರಾದ ಸ್ವಾಮಿ ಅಖಂಡಾನಂದರೇ ಜ್ವಲಂತ ಉದಾಹರಣೆಯಾಗಿದ್ದಾರೆ. ಅವರು ಸಾರಗಾಚಿಯಲ್ಲಿದ್ದ ತಮ್ಮ ಆಶ್ರಮದಲ್ಲಿ **ಸಹಸ್ರಶೀರ್ಷಾ ಪುರುಷಃ** ಎಂದು ಆರಂಭವಾಗುವ ಪುರುಷಸೂಕ್ತದ ಮಂತ್ರಗಳನ್ನು ಉಚ್ಚರಿಸುತ್ತ ಭಗವಂತನಿಗೆ ಅಭಿಷೇಕ ಮಾಡುತ್ತಿದ್ದೇನೆ ಎಂಬ ಭಾವದಿಂದ ಅನಾಥ ಮಕ್ಕಳಿಗೆ ಸ್ನಾನ ಮಾಡಿಸುತ್ತಿದ್ದರಂತೆ! ಸ್ವಾಮಿ ವಿವೇಕಾನಂದರ ಮಿತ್ರರಾದ ಶ್ರೀ ಪ್ರಮದ ದಾಸ್ ಮಿತ್ರರಿಗೆ ಅವರು ಒಮ್ಮೆ ಹೀಗೆ ಪತ್ರ ಬರೆಯುತ್ತಾರೆ: "ಮಕ್ಕಳಿಗೆ ಸೇವೆ ಮಾಡುವುದನ್ನು ಮಾಯೆ ಎಂದು ತಿಳಿಯಬಾರದು. ಸಾಕ್ಷಾತ್ ಭಗವಂತನೇ ನನಗೆ ಹೇಳುತ್ತಿದ್ದಾನೆ, 'ಮನುಷ್ಯನೇ ಭಗವಂತ. ರಾಮ, ಕೃಷ್ಣ ಮೊದಲಾದ ಅವತಾರಗಳೆಲ್ಲರೂ ಮನುಷ್ಯ ರೂಪರೇ. ಆದ್ದರಿಂದ ಮನುಷ್ಯನಲ್ಲಿರುವ ಮಹೇಶನಿಗೆ ಸೇವೆ ಮಾಡು!'"

ಹೀಗೆ ಸೇವೆಗೈಯುತ್ತ ಸ್ವಾಮಿ ಅಖಂಡಾನಂದರು ಶ್ರೀರಾಮಕೃಷ್ಣಮಯರಾಗಿಬಿಟ್ಟರು. ಎಲ್ಲ ಶೋಕ-ಭಯಗಳನ್ನೂ ದಾಟಿದವರಾಗಿದ್ದರು. ಜೀವನದ ಕೊನೆಯ ಗಳಿಗೆಯಲ್ಲಿ ಅವರು ತಮ್ಮ ಸುತ್ತಲಿದ್ದವರಿಗೆ ಹೀಗೆ ಹೇಳುತ್ತಿದ್ದರು: "ಬನ್ನಿ, ನನಗೆ ಸಹಾಯ ಮಾಡಿದವರನ್ನು ಆಶೀರ್ವದಿಸುತ್ತೇನೆ, ದುಃಖ ಕೊಟ್ಟವರನ್ನೂ ಆಶೀರ್ವದಿಸುತ್ತೇನೆ. ನನ್ನ ಪುಣ್ಯಗಳನ್ನೆಲ್ಲ ನೀವು ತೆಗೆದುಕೊಳ್ಳಿ! ನಿಮ್ಮ ಪಾಪಗಳನ್ನೆಲ್ಲ ನನಗೆ ಕೊಟ್ಟು ಬಿಡಿ! ನನಗೇನೂ ಭಯವಿಲ್ಲ, ಏಕೆಂದರೆ ನಾನು ರಾಮಕೃಷ್ಣರನ್ನು ಪಡೆದುಬಿಟ್ಟಿದ್ದೇನೆ."

## ಬನ್ನಿ, ಧನ್ಯರಾಗೋಣ!

ಸ್ವಾಮಿ ವಿವೇಕಾನಂದರಿಗೆ ಸ್ವಾಮಿ ಸದಾನಂದರೆಂಬ ಶಿಷ್ಯರಿದ್ದರು. ಅವರು ಒಮ್ಮೆ "ಸ್ವಾಮೀಜಿ, ಸೇವೆ ಮಾಡುವಾಗ ನಾನು ಆದರ್ಶದಿಂದ ಜಾರಿಬಿಟ್ಟರೆ ನನ್ನ ಗತಿಯೇನು?" ಎಂದು ಕೇಳಿದರಂತೆ. ಅದಕ್ಕೆ ಸ್ವಾಮೀಜಿ, "ನೂರು ಸಾರ ನೀನು ನರಕಕ್ಕೆ ಬಿದ್ದರೂ, ನಾನು ನರಕಕ್ಕಿಳಿದು ಬಂದು, ನಿನ್ನ ಜುಟ್ಟು ಹಿಡಿದು ಮೇಲೆ ತರುತ್ತೇನೆ" ಎಂದು ಉತ್ತರಿಸಿದರು. ಶ್ರೀರಾಮ ಕೃಷ್ಣರ ಭಕ್ತೆಯೊಬ್ಬಳು ತನ್ನ ಮೊಮ್ಮಗನನ್ನೇ ಬಾಲ ಗೋಪಾಲನಂತೆ ತಿಳಿದು ಅವನ ಸೇವೆ ಮಾಡಿ, 'ದಿವ್ಯ ದರ್ಶನ' ಪಡೆದುಕೊಂಡಳು!

ಹೀಗೆ ವಿವೇಕಾನಂದರು ನಮಗೆ ಹೇಳಿಕೊಟ್ಟಿರುವ 'ಸೇವಾದೀಕ್ಷೆ'ಯಿಂದ ನಮಗೆ **ತಾತ್ಕಾಲಿಕ ಆನಂದ** ಮತ್ತು **ಶಾಶ್ವತ ಆನಂದ** ಎರಡೂ ದೊರಕುತ್ತವೆ. ಅದರ ಮೂಲಕ ನಮ್ಮ ಐಹಿಕ ಜೀವನ ಆನಂದಮಯವಾಗುತ್ತದೆ. ಇದೇ ಅಭ್ಯುದಯ (ಲೌಕಿಕ ಸಮೃದ್ಧಿ) ಫಲ. ಅದಲ್ಲದೆ ಚಿತ್ತಶುದ್ಧಿಯಾಗಿ ಶುದ್ಧಮನಸ್ಸಿನಲ್ಲಿ ಪರಮಾತ್ಮನ ಅನುಭವವೂ ಉಂಟಾಗುತ್ತದೆ. ಇದು ನಿಃಶ್ರೇಯಸ (ಪಾರಮಾರ್ಥಿಕ) ಫಲ. ಹೀಗೆ ಲೌಕಿಕವಾಗಿ ಮತ್ತು ಆಧ್ಯಾತ್ಮಿಕವಾಗಿ- ಎರಡು ರೀತಿಯ ಪರಿಶುದ್ಧ ಆನಂದವನ್ನು ನಾವು ಸೇವಾದೀಕ್ಷೆಯ ಮೂಲಕ ಪಡೆದುಕೊಳ್ಳಬಹುದು.

ಬನ್ನಿ, ಶ್ರೀರಾಮಕೃಷ್ಣರು, ಶ್ರೀಮಾತೆ ಶಾರದಾದೇವಿಯವರು ಮತ್ತು ಸ್ವಾಮಿ ವಿವೇಕಾನಂದರು ನಮಗಿತ್ತಿರುವ 'ಸೇವಾದೀಕ್ಷೆ'ಯನ್ನು ಮನಃಪೂರ್ವಕ ಸ್ವೀಕರಿಸೋಣ. ನಮ್ಮೆಲ್ಲ ಕರ್ಮಗಳನ್ನೂ 'ಶಿವಪೂಜೆ'ಯೆಂದು ಮಾಡುತ್ತ, ಸೇವಾದೀಕ್ಷಿತರಾಗಿ, ಆ ಮೂಲಕ ದಿವ್ಯತ್ರಯರ ಅನುಗ್ರಹವನ್ನೂ, ಶಾಶ್ವತ ಆನಂದವನ್ನೂ ಪಡೆದು ಧನ್ಯರಾಗೋಣ!